**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಶೃಂಗೇರಿ**

**ಸಿ.ಸಿ. ನಂಃ 92/2022**

**ಫಿರ್ಯಾದುದಾರರು** ಃ ಶ್ರೀ ಎಸ್. ನಾಗೇಶ್ , ಬಿನ್. ಸಾಧು ಪೂಜಾರಿ ,
ವಯಸ್ಸು ಸುಮಾರು 49 ವರ್ಷ, ಬ್ಯೂಸಿನೇಸ್
ವಾಸಃ ಸಂಕ್ಲಾಪುರ, ಶೃಂಗೇರಿ,
ಶೃಂಗೇರಿ ತಾಲ್ಲೂಕು.

**ಃವಿರುದ್ಧಃ**

**ಆರೋಪಿ** ಃ ಶ್ರೀ ರಾಘವೇಂದ್ರ,ಬಿನ್ ಕೋಸೆ ಮರ್ಕಲ್,
ವಯಸ್ಸು ಸುಮಾರು 40 ವರ್ಷ, ಸಿವಿಲ್ ಕಾಂಟ್ರ್ಯಾಕ್ಟರ್
ವಾಸಃ ಕೋಟ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
ಈಗ ವಾಸಃ ಕೋಂ.ಮಹಮದ್ ಮಾಜರ್,
ಗಂಧರ್ವ ಹೋಟೆಲ್ ಎದುರು, ಭಾರತೀ ಬೀದಿ,
ಶೃಂಗೇರಿ ಟೌನ್, ಶೃಂಗೇರಿ ತಾಲ್ಲೂಕು.

*****

**ಆ ಪಾ ದ ನೆ**

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ಫಿರ್ಯಾದುದಾರರು ನೀವು ಸುಮಾರು ವರ್ಷಗಳಿಂದ ಪರಿಚಯ ಇದ್ದು, ನಿಮ್ಮ ಕಾಂಟ್ರ್ಯಾಕ್ಟ್ ಕೆಲಸದ ಅವಶ್ಯಕತೆಗಳಿಗೋಸ್ಕರ ಫಿರ್ಯಾದಿಯಿಂದ ಜಲ್ಲಿ, ಎಂ-ಸಾಂಡ್ ಮರಳು, ಜೆ.ಸಿ.ಬಿಯನ್ನು ನಿಮ್ಮ ಅವಶ್ಯಕತೆಗಾಗಿ ಅವರು ಒದಗಿಸಿ ರೂ.12,00,000-00 ಗಳ ಹಣವನ್ನು ಕೊಡಬೇಕಾಗಿರುತ್ತದೆ, ನಂತರ ಸದರಿ ಹಣದ ಮರುಪಾವತಿಸಲು ದಿನಾಂಕಃ10.11.2021 ರ ಒಳಗೆ ಕೊಡುವುದಾಗಿ ಹೇಳಿ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್‌ಗೆ ಎರಡು ಚೆಕ್‌ಗಳು ಸಂಖ್ಯೆಃ031926 ದಿನಾಂಕಃ26.11.2021 ರಂದು ರೂ.6,00,000-00 ಮತ್ತು ಸಂಖ್ಯೆಃ031927 ದಿನಾಂಕಃ26.11.2021 ರಂದು ರೂ.6,00,000-00 ಸದರಿ ಚೆಕ್ ಗಳಲ್ಲಿ ಒಂದನ್ನು ಸಂಖ್ಯೆಃ031926 ದಿನಾಂಕಃ30.11.2021 ರಂದು ಕರ್ನಾಟಕ ಬ್ಯಾಂಕ್, ಶೃಂಗೇರಿ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds

Insufficient) ಎಂದು ದಿನಾಂಕಃ30.11.2021 ರಂದು ಹಿಂಬರಹ ನೀಡಿದ್ದು ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ದಿಃ 20.12.2021 ರಂದು ನೋಟಿಸನ್ನು ನೀಡಿ, ಸದರಿ ಹಣವನ್ನು 15 ದಿನಗಳೊಳಗಾಗಿ ಮರುಪಾವತಿ ಮಾಡಬೇಕೆಂದು ತಿಳಿಸಿದ್ದರೂ ಸಹ ನೀವು ಆರೋಪಿ ಸದರಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೆಯ ಲಿಖಿತ ಕಾಯ್ದೆ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರಶ್ನೆ. 1 ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರ ಃ

ಪ್ರಶ್ನೆ.2 ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ ಃ 27.09.2022

(ದಾಸರಿ ಕ್ರಾಂತಿ ಕಿರಣ್ )
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಶೃಂಗೇರಿ.

ಆರೋಪಿಯ ಸಹಿಃ